**ಪಾಠ-6** **ಅಕ್ಟೋಬರ್ 31–ನವೆಂಬರ್ 6**

# ಶ್ರೇಷ್ಠ ಶಿಕ್ಷಕನಿಂದ ಹೆಚ್ಚು ಪಾಠಗಳು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾ. 3:1–11; ರೋಮ 5:11–19; ಆ.ಕಾ. 28:10–17; ಯೋಹಾನ 1:1–14; ಮತ್ತಾಯ 15:21–28; ಮಾರ್ಕ 10:46–52.

**ಸ್ಮರಣವಾಕ್ಯ : "ಯೇಸು ಅವನಿಗೆ ಹೋಗು, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿ ಅದೇ ಎಂದು ಹೇಳಿದನು; ಕೂಡಲೇ ಅವನಿಗೆ ಕಣ್ಣು ಬಂದವು; ಅವನು ಆ ದಾರಿಯಲ್ಲಿ ಆತನ ಹಿಂದೆ ಹೋದನು"** (ಮಾರ್ಕ 10:52).

ನಮ್ಮಲ್ಲಿ ಯಾರ ಜೀವನದಲ್ಲಿ ತಾನೇ ಮುಖಭಂಗವಾಗುವಂತಹ ಪ್ರಸಂಗ ನಡೆದಿಲ್ಲ ಹೇಳಿ? ನೆನೆಸಿಕೊಂಡರೆ, ಮನಸ್ಸಿಗೆ ನೋವು ಕೊಡುವಂತಹ ಕೆಲಸಗಳನ್ನು ನಾವು ಮಾಡಿರುವದಿಲ್ಲವೇ? ಬೇರೆಯವರಿಗೆ ಅದು ಗೊತ್ತಾಗಿ ಬಿಟ್ಟರೆ ಏನಾಗುತ್ತದೋ ಎಂದು ಹೆದರಿಕೆಯಿಂದ ಹಿಂಜರಿಯುವುದಿಲ್ಲವೇ? ಬಹುಶಃ ಹೆಚ್ಚುಕಡಿಮೆ ನಮ್ಮ ಎಲ್ಲರ ಜೀವನದಲ್ಲಿ ಒಂದಲ್ಲ ಒಂದು ಸಲ ಹಾಗೆ ಆಗಿರಲಿಕ್ಕೂ ಸಾಕು.

ಈಗ ಆದಾಮ ಮತ್ತು ಹವ್ವಳು, ತಿನ್ನಬಾರದು ಎಂದು ದೇವರು ಹೇಳಿದ ಮಾತನ್ನು ಮೀರಿ, ಆ ಹಣ್ಣನ್ನು ತಿಂದ ಅವರ ಪರಿಸ್ಥಿತಿ ಹೇಗಿತ್ತು ಎಂಬುದನ್ನು

* ನವೆಂಬರ್ 7ನೇ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠ ಅಧ್ಯಯನ ಮಾಡಿರಿ.

ಕಲ್ಪನೆ ಮಾಡಿ ನೋಡಿ. ಯಾಕೋಬ, ಮೋಸದಿಂದ ಅಣ್ಣನಿಗೆ ಸಿಗಬೇಕಿದ್ದ ಆಶೀರ್ವಾದವನ್ನು ತಾನು ತನ್ನ ತಂದೆಯಿಂದ ಪಡೆದುಕೊಂಡು ನಂತರ ಅಣ್ಣನ ಕೋಪಕ್ಕೆ ಹೆದರಿ ಮನೆಬಿಟ್ಟು ಓಡಿಹೋಗುವ ಪ್ರಸಂಗವನ್ನು ನೆನೆಸಿ ನೋಡಿರಿ. ಮನೆಬಿಟ್ಟು ಓಡಿಹೋದ ದಿನದ ರಾತ್ರಿ ಅವನು ಹೇಗೆ ನಿದ್ದೆ ಮಾಡಿದ್ದ? ನಿದ್ದೆ ಮಾಡುವುದು ಸಾಧ್ಯವಗಿತ್ತಾ? ವ್ಯಭಿಚಾರದಲ್ಲಿ ಸಿಕ್ಕಿಹಾಕಿಕೊಂಡ ಸ್ತ್ರೀಯನ್ನು ನೆನೆಸಿ ನೋಡಿರಿ. ವೇದದಲ್ಲಿ– **"ಈ ಹೆಂಗಸು ವ್ಯಭಿಚಾರ ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು"** ಎಂದು ಉಲ್ಲೇಖಿಸಿದೆ (ಯೋಹಾನ 8:4). ದಾವೀದನೂ ಇಂತಹ ಪ್ರಸಂಗದಲ್ಲಿಯೇ ಸಿಕ್ಕಿಬಿದ್ದಿದ್ದ. ಕೀರ್ತನೆ 32, ಈ ಘಟನೆಯ ಮನೋವೇದನೆಯ ಅಭಿವ್ಯಕ್ತಿ, ಪಶ್ಚಾತ್ತಾಪದ ಶೋಕಗೀತೆ.

ಈ ಒಂದು ಕಾರಣಕ್ಕಾಗಿ ಸುವಾರ್ತೆ ವಿಶ್ವವ್ಯಾಪಿ. ಕ್ರಿಸ್ತನ ಮರಣ ಇಡೀ ಮಾನವ ಸಂಕುಲಕ್ಕಾಗಿ. ನಮ್ಮ ನಡುವಿನ ಭಿನ್ನತೆಗಳು ಏನೇ ಇರಲಿ, ಆದರೆ ಪಾಪದ ವಿಷಯ ಬಂದಾಗ, ನಾವೆಲ್ಲ ಒಂದು. ಯಾಕೆಂದರೆ ಪಾಪ ಮಾಡದವರು ಒಬ್ಬರೂ ಇಲ್ಲ. ಎಂತಹ ನಿರುತ್ಸಾಹದ ಪರಿಸ್ಥಿತಿಯಲ್ಲಿದ್ದೇವೆ ನಾವು. ಕ್ರೈಸ್ತೀಯ ಶಿಕ್ಷಣವು ನಮ್ಮನ್ನು ಇದಕ್ಕಿರುವ ಒಂದೇ ಪರಿಹಾರದೆಡೆಗೆ ನಮ್ಮನ್ನು ಕೈಹಿಡಿದು ನಡೆಸಲಿ. ಆ ಒಂದೇ ಪರಿಹಾರ: ನಮ್ಮ ಶ್ರೇಷ್ಠ ಗುರು: ಈ ವಾರ ಆತನನ್ನು ಕುರಿತು ಮತ್ತಷ್ಟು ಧ್ಯಾನ ಮಾಡೋಣ.

**ಭಾನುವಾರ** **ನವೆಂಬರ್ 1**

## ಅಡಗಿಕೊಳ್ಳುವ ಬದಲು

**ಆದಿಕಾಂಡ 3:1–11 ವಚನಗಳನ್ನು ಓದಿಕೊಳ್ಳಿರಿ. ದೇವರು ಯಾಕೆ ಆದಾಮನನ್ನು ಉದ್ದೇಶಿಸಿ: "ನೀನು ಎಲ್ಲಿರುತ್ತಿ?" ಎಂದು ಕೂಗಿ ಕೇಳಿದನು?**

________________________________________

________________________________________

ಮಾನವನ ಅಧಃಪತನ ಕುರಿತ ಮಾದರಿಯ ಕಥೆಗಳು ಅಲ್ಲಿ ಪ್ರಸ್ತಾಪಿಸಲಾಗುವ ಹಣ್ಣನ್ನು ಆ್ಯಪಲ್ ಎನ್ನುತ್ತವೆ. ಆದರೆ ವಾಕ್ಯ ಹಾಗೆ ಹೇಳುವುದಿಲ್ಲ. ವಾಕ್ಯ ಸರಳವಾಗಿ "ಮರದ ಫಲ" ಎಂದು ಹೇಳಿದೆ (ಆ.ಕಾ. 2:3). ಎಂಥ ಹಣ್ಣು ಎನ್ನುವುದು ಮುಖ್ಯವಲ್ಲ. ಆದರೆ ಆ ಮರದ ಹಣ್ಣು ನಿಷಿದ್ಧವಾಗಿತ್ತು ಯಾಕೆಂದರೆ

ಆ ಮರ ಇನ್ನೇನನ್ನು ಹೇಳಲು ಅಲ್ಲಿತ್ತು. ಆಮಿಷ ಒಡ್ಡಲು ಅಲ್ಲಿ ನಿಂತಿದ್ದ ಆ ಮರ, ದೇವರನ್ನು ಬದಿಗೊತ್ತಿ, "ನನ್ನ ಸ್ವಂತ ಜೀವನದ ನಿರ್ದಿಷ್ಟಮಾನ ನಾನೇ, ನನಗೆ ನಾನೇ ದೇವರು. ದೇವರ ವಾಕ್ಯದ ಮೇಲೆ ನನಗೆ ಅಧಿಕಾರವಿದೆ" ಎಂದು ಘೋಷಿಸುತ್ತಿತ್ತು.

"ಹಾವು" ಅಥವಾ "ಸರ್ಪ", ಆದಾಮ ಮತ್ತು ಹವ್ವಳನ್ನು ಆ ಮರದ ಹಣ್ಣು ತಿನ್ನುವಂತೆ ಮಾಡಿದ ಮೇಲೆ, ಅವರ ಜೀವನ ದಾರಿ ತಪ್ಪಿತು. ಆ ಬಳಿಕ ದೇವರು ತಮ್ಮ ಬಳಿಸಾರುತ್ತಿದ್ದಾನೆ ಎಂಬುದು ಗೊತ್ತಾದಾಗ, ಆತನಿಗೆ ಕಾಣಿಸಬಾರದೆಂದು "**ತೋಟದ ಮರಗಳ ಹಿಂದೆ ಅಡಗಿಕೊಂಡರು**" (ಆ.ಕಾ. 3:8).

ಅವರು ಎಲ್ಲಿದ್ದಾರೆ ಎಂಬುದು ಖಚಿತವಾಗಿ ದೇವರಿಗೆ ಗೊತ್ತಿದ್ದರೂ, ಆತನು ಆದಾಮನನ್ನು ಕುರಿತು– "**ನೀನು ಎಲ್ಲಿರುತ್ತಿ**?" ಎಂದು ಕೇಳುವುದು ವಿಚಿತ್ರ ಎನಿಸಬಹುದು. ಆದಾಮ–ಹವ್ವಳು ಏನು ಮಾಡಿದ್ದರೋ ಅದನ್ನು ಗ್ರಹಿಸಲು ಸಹಾಯ ಮಾಡುವ ಸಲುವಾಗಿಯೇ ದೇವರು ಆ ಪ್ರಶ್ನೆಯನ್ನು ಬಹುಶಃ ಕೇಳಿರಬಹುದು. ಅವರು ಏನು ಮಾಡಿದ್ದರೋ ಅದಕ್ಕಾಗಿಯೇ ಅವರು ಅಡಗಿಕೊಂಡಿದ್ದರು. ಅವರ ನಡತೆಯ ಶೋಕದ ಫಲಿತಾಂಶವನ್ನು ಅವರಿಗೆ ಅರ್ಥಮಾಡಿಸಲು ದೇವರು ಸಹಾಯಮಾಡಿದ್ದನು.

ರೋಮ 5:11–19ನ್ನು ಓದಿಕೊಳ್ಳಿರಿ. ಇಲ್ಲಿ ಪೌಲನು ಹಲವು ಸಲ, ಆದಾಮ ಏದೆನ್‌ನಲ್ಲಿ ಏನು ಮಾಡಿದನೋ ಅದರೊಂದಿಗೆ ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದನ್ನು ನೇರವಾಗಿ ಜೋಡಿಸುತ್ತಾನೆ. ಆದಾಮನು ಮಾಡಿದ್ದನ್ನು ನಾಶ ಮಾಡುವುದಕ್ಕಾಗಿ ಹೇಗೆ ಯೇಸು ಬಂದನು ಎಂಬ ವಿಷಯದಲ್ಲಿ ಈ ವಾಕ್ಯಗಳು ಹೇಳುವುದೇನು?

________________________________________

________________________________________

ಆದಾಮ ಮತ್ತು ಹವ್ವಳು ಕೊಟ್ಟ ಉತ್ತರಕ್ಕೆ ದೇವರು ಕೊಟ್ಟ ಪ್ರತಿಕ್ರಿಯೆಯೇ ರಕ್ಷಣೆಯ ಯೋಜನೆಯೆಂದು ಕೆಲವರು ವಾದ ಮಾಡುವುದುಂಟು. ಆದಾಮ

ಮತ್ತು ಹವ್ವಳು ತಮಗಾದ ಮುಖಭಂಗದಿಂದಲೂ ಮತ್ತು ಅಪರಾಧಿ ಮನೋಭಾವದಿಂದಲೂ, ಅವರು ದೇವರ ಸನ್ನಿಧಿಗೆ ಬಾರದೆ, ಆತನಿಂದ ಮರೆಯಾಗಲು ಅಡಗಿಕೊಂಡಿದ್ದರು. ಆದರೆ ದೇವರು ಅವರನ್ನು ಕಾಪಾಡಲು ಬಂದಿದ್ದನು. ನಮ್ಮದೇ ಆದ ರೀತಿಯಲ್ಲಿ, ನಾವು ಕೂಡ ಅದನ್ನೇ ಮಾಡಿದ್ದೇವೆ, ಮಾಡುತ್ತಿದ್ದೇವೆ. ನಮ್ಮನ್ನು ಕಾಪಾಡಲು ಯೇಸುಕ್ರಿಸ್ತನು ಬಂದನು. ಆದ್ದರಿಂದಲೇ "ನೀನು ಎಲ್ಲಿರುತ್ತಿ?" ಎಂಬ ಪ್ರಶ್ನೆ ನಮ್ಮನ್ನು ಕುರಿತೂ ಸಹ ಕೇಳಿದಂತಿದೆ. ಪಾಪ, ಪಾಪದ ಅಪರಾಧಿ ಮನೋಭಾವ ಮತ್ತು ಯೇಸುಕ್ರಿಸ್ತನೊಂದಿಗಿನ ಸಂಬಂಧದ ವಿಷಯದಲ್ಲಿ ನೀವು ಎಲ್ಲಿದ್ದೀರಿ? ನಿಮ್ಮನ್ನು ನಿಮ್ಮ ಪಾಪದಿಂದ ರಕ್ಷಿಸಲು ಕ್ರಿಸ್ತನು ಮಾಡಿರುವುದೇನು?

**ಕ್ರೈಸ್ತೀಯ ಶಿಕ್ಷಣ ಏನೆಲ್ಲ ಸಾಧಿಸಬೇಕೆಂದುಕೊಂಡಿದೆಯೋ, ಅದೆಲ್ಲವನ್ನು ಸಾಧಿಸಬೇಕು, ಏಕೆ? ದೇವರಿಂದ ಅಡಗಿಕೊಳ್ಳುವುದೇ ನಮ್ಮ ಸ್ವಭಾವ, ಆದರೆ ಅದಕ್ಕೆ ಇರುವ ಒಂದೇ ಪರಿಹಾರ ಮಾರ್ಗ: ಯೇಸು ಎಂಬುದನ್ನು ಹೇಗೆ ಒತ್ತಾಯ ಪೂರ್ವಕವಾಗಿ ಪ್ರತಿಪಾದಿಸುತ್ತೀರಿ?**

**ಸೋಮವಾರ** **ನವೆಂಬರ್ 2**

## ಓಟ

**ಆದಿಕಾಂಡ 28:10–17ನ್ನು ಓದಿಕೊಳ್ಳಿರಿ. ಇಲ್ಲಿನ ಕಥೆಯ ಸನ್ನಿವೇಶವೇನು? ಪಾಪ ಮಾಡಿ, ಅದರಿಂದ ತಪ್ಪಿಸಿಕೊಂಡು ಓಡಿಹೋಗುತ್ತಿರುವವರಿಗೆ, ದೇವರು ತೋರುವ ಕೃಪೆಯವಿಷಯದಲ್ಲಿ, ಈ ಕಥೆಯ ಸನ್ನಿವೇಶ ನಮಗೆ ಬೋಧಿಸುವುದೇನು?**

ತನ್ನ ತಾಯಿಯ ಸಹಾಯದಿಂದ, ಯಾಕೋಬ, ಇನ್ನುಳಿದ ತನ್ನ ಕುಟುಂಬದವರಿಗೆ ಬಹಳ ಕ್ರೂರವಾದ ಮೋಸಮಾಡಿ ಓಡಿಬಂದವನು, ಈಗ ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದಾನೆ. ಒಂದು ಕಡೆ ಅವನ ಅಣ್ಣ ಅವನಿಗೆ ವಿರುದ್ಧವಾಗಿ ಬೆದರಿಕೆಯನ್ನು ಉಸಿರಾಡುತ್ತಿದ್ದಾನೆ. ಇನ್ನೊಂದೆಡೆ, ತಮ್ಮ ನಿರಾಶ್ರಿತನಾಗಿ ಅಲೆಯುತ್ತಾ ಖಾರಾನಿನಲ್ಲಿರುವ ತನ್ನ ಸೋದರ ಮಾವನ ಮನೆಯ ಕಡೆಗೆ ನಡೆದಿದ್ದಾನೆ. ಪ್ರಯಾಣ ಕೊನೆಗೊಂಡಿಲ್ಲ. ಅವನಿಗಿರುವ

ತಾಣ ಭಯಾನಕ. ಒಂದು ದಿನ ಯಾಕೋಬ ಮುಸ್ಸಂಜೆಯೊಳಕ್ಕೆ ಪ್ರಯಾಸದಿಂದ ಹೆಜ್ಜೆ ಹಾಕುತ್ತಿದ್ದಾನೆ; ಸೂರ್ಯ ಮುಳುಗಿದ, ಕತ್ತಲು ಮುಸುಕಿತು. ತಾನು ಎಲ್ಲಿದ್ದೇನೆ ಎಂದು ಅವನಿಗೇ ಗೊತ್ತಿಲ್ಲ. ತಲೆಯ ಮೇಲೆ ಆಕಾಶವೇ ಸೂರು, ಒಂದು ಕಲ್ಲು ತೆಗೆದುಕೊಂಡು, ತಲೆದಿಂಬು ಮಾಡಿಕೊಂಡು, ನಿದ್ದೆಹೋದ, ಮೈಮುರೆತು ಆಯಾಸದಿಂದ ನಿದ್ದೆಮಾಡುತ್ತಿದ್ದವನಿಗೆ ಇದ್ದಕ್ಕಿದ್ದಂತೆ ನಿದ್ರಾಭಂಗವಾಯಿತು. ಅತ್ಯಂತ ಸುಂದರವಾದ ಕನಸು ಕಂಡು ಎಚ್ಚರಗೊಂಡು ಕುಳಿತಿದ್ದ. ಕನಸಿನಲ್ಲೊಂದು ನಿಚ್ಚಣಿಗೆ ಕಂಡಿದ್ದ. ಅದರ ತಳ ಭೂಮಿಯ ಮೇಲಿತ್ತು, ತುದಿ ಆಕಾಶ ಮುಟ್ಟಿತ್ತು. ಆ ನಿಚ್ಚಣಿಗೆ ಮೇಲೆ ದೇವದೂತರು ಹತ್ತಿಳಿಯುತ್ತಿದ್ದರು.

ಆಗ ಧ್ವನಿಯೊಂದನ್ನು ಕೇಳಿಸಿಕೊಳ್ಳುತ್ತಾನೆ– "ನಾಮ ನಿನ್ನ ತಂದೆಯಾದ ಅಬ್ರಹಾಮನ ದೇವರೂ ಇಸಾಕನ ದೇವರೂ ಆಗಿರುವ ಯೆಹೋವನು" (ಆ.ಕಾ. 28:19), ತನ್ನ ಕುಟುಂಬದ ಸಂಪ್ರದಾಯದಲ್ಲಿ ಬಹು ಚಿರಪರಿಚಿತವಾಗಿರುವ ಆ ಧ್ವನಿ ತನ್ನ ವಾಗ್ದಾನಗಳನ್ನು ಮತ್ತೆ ಪುನರಾವರ್ತಿಸುತ್ತಿದೆ: "ನಿನ್ನ ಸಂತತಿಯ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವುದು. ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ ತಿರುಗಿ ಈ ದೇಶಕ್ಕೆ ಬರಮಾಡುತ್ತೇನೆ. ನಾನು ನಿನಗೆ ಹೇಳಿದ್ದನ್ನೆಲ್ಲಾ ನೆರವೇರಿಸಿದ ಹೊರತು ಬಿಡುವುದಿಲ್ಲ ಅಂದನು" (ಆ.ಕಾ. 28:15).

ಈ ವಿಷಯಕ್ಕೆ ಸಂಬಂಧಿಸಿದಂತೆ ಪೌಲನು ಹೇಳಿದ ಮಾತುಗಳನ್ನು, ವೈಟಮ್ಮನವರು ಹೀಗೆ ಮೆಲುಕು ಹಾಕಿದ್ದಾರೆ: "ಯಾಕೋಬನ ಕನಸಿನ ನಿಚ್ಚಣಿಗೆ ಕ್ರಿಸ್ತನನ್ನು ಪ್ರತಿನಿಧಿಸುತ್ತದೆ. ಆತನು ತಾನೇ ಭೂಲೋಕವನ್ನು ಪರಲೋಕಕ್ಕೆ, ಮರ್ತ್ಯನಾದ ಮನುಷ್ಯನನ್ನು ಅಮರನಾದ ದೇವರೊಂದಿಗೂ ಜೋಡಿಸಿದ್ದನು. ಯಾವಾತನು ಮನುಕುಲಕ್ಕೆ ಬೆಂಬಲಿಗನಾಗಿ ನಿಂತು, ಅವರ ದುಃಖೋಪಶಮನ ಮಾಡುತ್ತಿದ್ದನೋ ಮತ್ತು ಅವರಿಗಾಗಿಯೇ ತನ್ನ ಪ್ರಾಣವನ್ನೇ ಬಿಟ್ಟನೋ, ಆತನ ಮೇಲೆ ತನ್ನ ಪೂರ್ವಿಕರೂ ಮತ್ತು ಪ್ರವಾದಿಗಳೂ ಇಟ್ಟಿದ್ದ ನಂಬಿಕೆಯನ್ನು ಕಂಡು ಯಾಕೋಬ ದೇವರ ಮೇಲಿನ ನಂಬಿಕೆಯನ್ನು ಬಲಪಡಿಸಿಕೊಂಡಿದ್ದನು" ದಿ ಆ್ಯಕ್ಟ್ಸ್ ಆಫ್ ದಿ ಅಪೋಸ್ತಲ್ಸ್, ಪುಟ 512.

ನಿದ್ದೆಯಿಂದ ಎಚ್ಚೆತ್ತ ಯಾಕೋಬ, ತನ್ನಲ್ಲೇ ಹೀಗಂದುಕೊಳ್ಳುತ್ತಾನೆ: "ನಿಜವಾಗಿ ಯೆಹೋವನು ಈ ಸ್ಥಳದಲ್ಲಿ ಇದ್ದಾನೆ. ಅದು ನನಗೆ ತಿಳಿಯದೆ ಹೋಯಿತು. ಇಲ್ಲಿ ಏನು ನಡೆಯಿತೋ, ಅದು, "ಭಯಂಕರ". ಯಾಕೋಬ ಇನ್ನೆಂದಿಗೂ ಆ ಸ್ಥಳವನ್ನು ಮರೆಯುವುದು ಸಾಧ್ಯವಿರಲಿಲ್ಲ. ಆ ಸ್ಥಳಕ್ಕೆ ಬೇತೆಲ್ ಎಂದು ಹೆಸರಿಡುತ್ತಾನೆ. ತನ್ನ ಜೀವಮಾನ ಕಾಲದುದ್ದಕ್ಕೂ ದೇವರಿಗೆ ಪ್ರಾಮಾಣಿಕನಾಗಿ ನಡೆದುಕೊಳ್ಳುವುದಾಗಿ ಪ್ರತಿಜ್ಞೆ ಮಾಡುತ್ತಾನೆ.

**ನಾವು ಪಾಪಮಾಡಿದ್ದರೂ ಸಹ, ದೇವರು, ಕ್ರಿಸ್ತನ ಮೂಲಕ ನಮ್ಮ ಸಹಾಯಕ್ಕೆ ಧಾವಿಸಿ ಬರುತ್ತಿದ್ದಾನೆ ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಕಲಿಯುವುದೇನು? ಕ್ರೈಸ್ತೀಯ ಶಿಕ್ಷಣ ತನ್ನ ಬೋಧನೆಯಲ್ಲಿ ಈ ವಿಷಯವನ್ನು ಮುಂಚೋಣಿಯಲ್ಲಿ ಇಡಬೇಕು ಯಾಕೆ?**

**ಮಂಗಳವಾರ** **ನವೆಂಬರ್ 3**

## ಯೇಸು ಎಂಬ ರಬ್ಬಿ (ಶಿಕ್ಷಕ)

ಹೊಸ ಒಡಂಬಡಿಕೆಯಲ್ಲಿರುವ ಎಲ್ಲಾ ಅಧ್ಯಾಯಗಳ ಪ್ರಾರಂಭಗಳಿಗೆ ಹೋಲಿಸಿದರೆ– "**ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು. ಆ ವಾಕ್ಯವು ದೇವರಾಗಿತ್ತು**" ಎಂದು ಪ್ರಾರಂಭವಾಗುವ ಈ ಅಧ್ಯಾಯದಷ್ಟು ಜನಪ್ರಿಯತೆಯನ್ನು ಬೇರಾವ ಅಧ್ಯಾಯವು ಗಳಿಸಿಲ್ಲ. ಹೀಗೆ ಯೋಚನೆ ಮಾಡುತ್ತಿರುವಾಗಲೇ, ಯೋಹಾನ ಮತ್ತೊಂದು ಮರೆಯಲಾಗದ ವಚನದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತಾನೆ– "**ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದಾನೆ**" (ಯೋಹಾನ 1:14).

**ಯೋಹಾನ 1:1–14ನ್ನು ಓದಿಕೊಳ್ಳಿರಿ. ಯೇಸು ಯಾರಾಗಿದ್ದನು ಮತ್ತು ಆತನು ಇಲ್ಲಿ ಏನು ಮಾಡಿದನು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈ ವಾಕ್ಯಗಳು ನಮ್ಮೊಂದಿಗೆ ಹಂಚಿಕೊಳ್ಳುವುದೇನು? ಯೇಸುಕ್ರಿಸ್ತನು ಒಬ್ಬ ಶಿಕ್ಷಕ ಎಂಬುದಕ್ಕೆ**

**ಇದೊಂದು ದೊಡ್ಡ ಮಾದರಿ ಎಂಬ ವಿಷಯದಲ್ಲಿ ಈ ವಾಕ್ಯಗಳು ಹೇಳುವುದೇನು?**

ಏದೆನ್ ತೋಟದಲ್ಲಿ ಆದಾಮ ಮತ್ತು ಹವ್ವಳೊಂದಿಗೆ ಮಾತನಾಡುತ್ತಿದ್ದ ಮತ್ತು ಯಾಕೋಬನೊಂದಿಗೆ ಬೇತೇಲ್‌ನಲ್ಲಿ ಕಾರ್ಗತ್ತಲೆಯಲ್ಲಿ ಮಾತನಾಡಿದ್ದ ಆ ದೇವರೇ ಇಲ್ಲಿ ಮಾನವನಾಗಿ ಬಂದಿದ್ದಾನೆ. ದೇವರು, ಹೊಸ ಒಡಂಬಡಿಕೆಯು ಕ್ರಿಸ್ತನಲ್ಲಿ ವ್ಯಕ್ತಿರೂಪ ಪಡೆದುಕೊಂಡಿತು ಎಂದು ಹೇಳಿದ್ದಾನೆ. ಯೇಸುಕ್ರಿಸ್ತನ ಮೂಲಕ, ನಾವು ದೇವರ ಚಿತ್ತ ಮತ್ತು ದೇವರ ದಾರಿಯನ್ನು ಕುರಿತು ಕಲಿಯಬಹುದು. ಯಾಕೆಂದರೆ: ಯೇಸು ದೇವರೇ ಆಗಿದ್ದಾನೆ.

ಈ ಅಧ್ಯಾಯ, ಮುಂದೆ, ಸ್ನಾನಿಕನಾದ ಯೋಹಾನನು ಎಂತಹ ಗಮನವನ್ನು ತೀವ್ರವಾಗಿ ಸೆಳೆಯುವ ಪ್ರಸಂಗಿಯಾಗಿದ್ದನೆಂದರೆ, ಅಂದಿನ ಯೆರೂಸಲೇಮಿನ ಧಾರ್ಮಿಕ ಮುಖಂಡರುಗಳೇ ಈತ ಯಾರೋ ಬಹು ವಿಶೇಷವಾದ ವ್ಯಕ್ತಿಯಾಗಿರಬೇಕೆಂದು ಅನುಮಾನಪಟ್ಟಿದ್ದರು ಎಂದು ಹೇಳುತ್ತದೆ. ಆದರೆ ಅವನು ತನಗಿಂತಲೂ ಯೋಗ್ಯತಾ ಪುರುಷನೊಬ್ಬನ ಆಗಮನಕ್ಕೆ ದಾರಿ ಸಿದ್ಧಪಡಿಸುತ್ತಿದ್ದನು. ತುಂಬಾ ವಿಶೇಷನಾದವನೂ, ಕಟ್ಟೆಚ್ಚರಿಯನ್ನುಂಟು ಮಾಡುವಾತನೊಬ್ಬ ಆಗಮಿಸಲಿದ್ದನು. ಅವನ ವಿಷಯದಲ್ಲಿ ಯೋಹಾನನು - "**ಆತನ ಕೆರದ ಬಾರನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ**" ಎಂದು ಹೇಳಿದ್ದಾನೆ (ಯೋಹಾನ 1:27).

ಮರುದಿನ ಯೋಹಾನ, ಯೇಸುಸ್ವಾಮಿಯನ್ನು ಕಂಡನು. ಆಗ ಅವನು ಆತನನ್ನು ಕುರಿತು- "**ದೇವರ ಕುಮಾರನು**" ಎಂದನು. ಮರುದಿನ ಮತ್ತೆ ತನ್ನ ಕಡೆಗೆ ಬರುವ ಯೇಸುವನ್ನು ನೋಡಿ- "**ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ**" ಎಂದು ಹೇಳಿದ್ದನು.

ನಂತರ ಸ್ನಾನಿಕನಾದ ಯೋಹಾನನ ಇಬ್ಬರು ಶಿಷ್ಯರು, ಯೇಸುಕ್ರಿಸ್ತನನ್ನು ಹಿಂಬಾಲಿಸಬೇಕೆಂದು ತೀರ್ಮಾನಿಸಿಕೊಂಡರು. ಯೇಸು ಹಿಂತಿರುಗಿ ಅವರು ತನ್ನ ಹಿಂದೆ ಬರುವುದನ್ನು ಕಂಡು- "**ನಿಮಗೆ ಏನು ಬೇಕಾಗಿದೆ**" ಎಂದು

ಕೇಳಲು, ಅವರು "ರಬ್ಬಿಯೆ...." ಎಂದು ಆತನನ್ನು ಉದ್ದೇಶಿಸಿ ನುಡಿದಿದ್ದರು (ರಬ್ಬಿ ಎಂದರೆ ಗುರು). ಯೋಹಾನ 1:38.

ಯೇಸುವನ್ನು "**ರಬ್ಬಿ**" ಅಂದರೆ: "**ಗುರು**" ಎಂದು ಕರೆದಿದ್ದಾರೆ. ಆದರೆ ಮಾನವರಲ್ಲಿ ಆತನಂಥ ಗುರುವೊಬ್ಬ ಇರಲೇ ಇಲ್ಲ, ಯಾಕೆಂದರೆ ಆತನು ದೇವರೇ ಆಗಿದ್ದಾನೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ದೇವರು, ಮಾನವನ ರೂಪದಲ್ಲಿ, ಮಾನವರ ನಡುವೆ ಬಂದು ಬದಕ್ಕಿದ್ದನು. ಹಾಗೆ ಬದುಕಿದ್ದಾಗ "ರಬ್ಬಿ" ಅಂದರೆ "ಗುರು"ವಿನ ಕೆಲಸ ಮಾಡಿದ್ದನು. ವೈಟಮ್ಮನವರು, ಯೇಸುಕ್ರಿಸ್ತನನ್ನು ಕುರಿತು– "**ಜಗತ್ತು ಕಂಡ ಅತ್ಯುತ್ತಮ ಗುರು**" ಎಂದು ಹೇಳಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ. (ಸ್ಸೈನ್ಸ್ ಆಫ್ ದಿ ಟೈಮ್ಸ್, ಜೂನ್ 10, 1886). ಹೌದು, ಈ ಗುರುವೇ ನಮ್ಮ ದೇವರೂ ಸಹ.

**ಯೇಸು ಕ್ರಿಸ್ತನನ್ನು ದೇವರು ಎಂದು ಅರಿತುಕೊಂಡ ಮೇಲೆ, ಅಧ್ಯಾತ್ಮಿಕ ಸತ್ಯಗಳನ್ನು ಉತ್ತಮವಾದ ರೀತಿಯಲ್ಲಿ ಬೋಧಿಸಲು ಆತನಿಂದ ಕಲಿಯಬೇಕೆನ್ನುವುದು ಅರ್ಥಪೂರ್ಣವೆನಿಸುವುದೇಕೆ? ಬೋಧನೆಯಲ್ಲಿ ನಾವು ಏನು ಹೇಳುತ್ತೇವೋ ಅದು ಮುಖ್ಯವಲ್ಲ. ಆದರೆ ನಾವು ಬೋಧಿಸಿದಂತೆ ನಡೆದುಕೊಳ್ಳುತ್ತೇವೆಯೋ ಎಂಬುದು ಮುಖ್ಯ ಎಂಬ ವಿಷಯದಲ್ಲಿ ನಾವು ಯೇಸುಕ್ರಿಸ್ತನಿಂದ ಕಲಿಯುವುದೇನು?**

**ಬುಧವಾರ** **ನವೆಂಬರ್ 4**

## ಹಿಂತಿರುಗಿಸಿ ಮಾತನಾಡಿದ ಒಬ್ಬ ಸ್ತ್ರೀ

ಯೇಸು ಒಬ್ಬ ಶ್ರೇಷ್ಠ ಗುರು. ಆತನ ಬೋಧನೆ ಮತ್ತು ಆತನ ಜೀವನದಲ್ಲಿ ದೇವರ ನಿಜವಾದ ಚಾರಿತ್ರ್ಯ (ಗುಣ–ನಡೆ–ನುಡಿ) ಬೆಳಗಿದೆ. ಯಾರಾದರೂ ತನಗೆ ಹಿಂತಿರುಗಿ ಮಾತಾಡಿದರೂ ಯೇಸುಸ್ವಾಮಿ ಕೇಳಿಸಿಕೊಳ್ಳುತ್ತಾನೆ ಎಂಬುದಕ್ಕೆ ಒಂದು ಸುವಾರ್ತೆಯ ಕಥೆ ಗಮನಾರ್ಹವಾಗಿದೆ.

**ತೂರ್ ಸೀದೋನ್ ಪಟ್ಟಣಗಳಿಗೆ ಸೇರಿದ ಕಾನಾನ್ಯಳಾದ ಸ್ತ್ರೀಯೊಬ್ಬಳು ಯೇಸುಸ್ವಾಮಿಯನ್ನು ಭೇಟಿಮಾಡುವ ಕಥೆಯನ್ನು ಓದಿಕೊಳ್ಳಿರಿ (ಮತ್ತಾಯ 15:21–28, ಮಾರ್ಕ 7:24–30). ಯೇಸುಸ್ವಾಮಿಗೆ ಸಮೀಪರಾದವರು ಭೇಟಿಗೆ ಬಂದ ಸ್ತ್ರೀಯ ವಿಷಯದಲ್ಲಿ ತಾಳ್ಮೆ ಕಳೆದುಕೊಳ್ಳುವುದನ್ನೂ ಮತ್ತು ಯೇಸುಸ್ವಾಮಿ**

**ಅಸಮಾಧಾನ ವ್ಯಕ್ತಪಡಿಸುವುದನ್ನೂ ಗಮನಿಸಿರಿ. ಆ ಸ್ತ್ರೀಯ ದಿಟ್ಟತನದ ವಿಷಯದಲ್ಲಿ ನಿಮಗೆ ಅನ್ನಿಸುವುದೇನು? ಯೇಸುಸ್ವಾಮಿ, ತಾನೇ ಇತರರಿಗೆ ಬೋಧನೆ ಮಾಡಿದ ವಿಷಯದಲ್ಲಿ ಈ ಕಥೆ ನಮಗೆ ಬೋಧಿಸುವುದೇನು?**

ಯೇಸುಸ್ವಾಮಿ ತೂರ್ ಸೀದೋನ್ ಪಟ್ಟಣಗಳ ಪ್ರಾಂತ್ಯಗಳ ಬಳಿಯಲ್ಲಿದ್ದನು. ಆತನು ಬಂದಿದ್ದ ಸ್ಥಳ ಅಪರಿಚಿತರಿಂದ ತುಂಬಿತ್ತು ಮತ್ತು ಜನಾಂಗೀಯ ಮಾನಸಿಕ ಉದ್ವೇಗಗಳು ಬಿರುಸಾಗಿತ್ತು. ಪಟ್ಟಣದಲ್ಲಿ ತಂಗಿದ್ದ ಗ್ರೀಕ್ ಭಾಷೆ ಮಾತಾಡುವವರು, ಹಳ್ಳಿಗಾಡಿನ ರೈತಾಪಿ ಯೆಹೂದ್ಯರನ್ನು ಕೀಳಾಗಿ ಕಾಣುತ್ತಿದ್ದರು. ಅದೇ ರೀತಿಯಲ್ಲಿ ಯೆಹೂದಿ ರೈತರುಗಳೂ ಅವರನ್ನು ಕೀಳಾಗಿ ಕಾಣುತ್ತಿದ್ದರು.

ಸ್ವಲ್ಪ ಕಾಲದ ಹಿಂದೆ, ಯೇಸುವಿನ ತವರಾದ ಗಲಿಲಾಯದ ಕೈಗೊಂಬೆ ಗೌರ್ನರ್ ಆದ ಹೆರೋದನು, ಸ್ನಾನಿಕನಾದ ಯೋಹಾನನ ತಲೆಕಡಿದು ಹಾಕಿದ್ದನು. ಯೋಹಾನನ ಸಂಗತಿಗಳನ್ನು ಯೇಸು ಬಹಳವಾಗಿ ಹಂಚಿಕೊಂಡಿದ್ದನು. ಅವನ ತಲೆಕಡಿದದ್ದು ಅಶುಭ ಎನಿಸಿತ್ತು ಕೆಲವರಿಗೆ. ತನ್ನ ಸೇವೆಗೆ ಎದುರಾಗುತ್ತಿದ್ದ ಅಪಾಯಗಳನ್ನು ಯೇಸು ಎದುರಿಸಬೇಕಾಗಿ ಬಂದಿತ್ತು.

ಯೇಸು ದಣಿದಿದ್ದನು. ಯಾರಿಗೂ ಗೊತ್ತಾಗದಂತೆ ಮನೆಯೊಂದರಲ್ಲಿ ವಿಶ್ರಾಂತಿಸಬೇಕೆಂದಿದ್ದನು. ಮಾರ್ಕ, ತನ್ನ ಸುವಾರ್ತೆಯಲ್ಲಿ ಇದನ್ನು ಉಲ್ಲೇಖಿಸಿದ್ದಾನೆ (ಮಾರ್ಕ 7:24). ಆದರೆ ಆತನು ಗುಪ್ತವಾಗಿರುವುದಕ್ಕೆ ಆಗದೆ ಹೋಯಿತು. ಆದರೂ ಈ ಕಾನಾನ್ಯಳಾದ ಸ್ತ್ರೀ ಆತನನ್ನು ಕಾಣಲಿಕ್ಕೆ ಬಂದಿದ್ದಳು.

ಅಂದಿನ ಕಾಲದ ಸ್ಥಳ ಮತ್ತು ಸಂಸ್ಕೃತಿಯಲ್ಲಿ ಹೆಂಗಸೊಬ್ಬಳು ತನ್ನ ಬಗ್ಗೆ ತಾನು ಹೇಳಿಕೊಳ್ಳುವುದಕ್ಕೆ ಸ್ವಾತಂತ್ರ್ಯವಿರಲಿಲ್ಲ. ಆಕೆ ಜೀವನ ಮಾಡುತ್ತಿದ್ದ ಸ್ಥಳ ಮತ್ತು ಜನಾಂಗಕ್ಕೆ ಯೆಹೂದಿಗಳಿಗೆ ಒಲವಿರಲಿಲ್ಲ. ಇವೆಲ್ಲವು ಆಕೆಗೆ ಆಗಬೇಕಾಗಿದ್ದ ಕೆಲಸಕ್ಕೆ ಅನಾನುಕೂಲವನ್ನು ತಂದೊಡ್ಡಿದ್ದವು.

ಆ ಕಾನ್ಯಾನ್ಯಳಾದ ಸ್ತ್ರೀಯ ಮಗಳು ಅಸ್ವಸ್ಥಳಾಗಿದ್ದಳು. ಆಕೆಗೆ ಯೇಸು

ಸ್ವಾಮಿಯಿಂದ ಸಹಾಯವಾಗಬೇಕಿತ್ತು. ಆ ಸಹಾಯವನ್ನು ಪಟ್ಟುಹಿಡಿದು ಸಾಧಿಸಿಕೊಳ್ಳಲು ಆಕೆಗೆ ನಿಶ್ಚಯಿಸಿಕೊಂಡಿದ್ದಳು.

ಯೇಸುಸ್ವಾಮಿ– **"ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿ ಮರಿಗಳಿಗೆ ಹಾಕುವುದು ಸರಿಯಲ್ಲ"** ಎಂದು ಹೇಳಿ ಆಕೆಯನ್ನು ದೂರಮಾಡಲು ಯತ್ನಿಸಿದನು. ಯೇಸುಸ್ವಾಮಿಯ ಈ ಮಾತು ಆಕೆಯ ಮನಸ್ಸನ್ನು ನೋಯಿಸಲಿಕ್ಕೂ ಸಾಕು.

ಆನಂತರ ಗಮನಾರ್ಹವಾದ ಸಂಗತಿಯೊಂದು ನಡೆದುಹೋಗಿತ್ತು. ಆತನ ಮಾತಿಗೆ ಆಕೆ ಪ್ರತಿಕ್ರಿಯೆ ನೀಡಿದ್ದಳು. ನಾಯಿಗಳ ಬಗ್ಗೆ ಆಕೆಗೆ ಗೊತ್ತಿತ್ತು. ಯೆಹೂದ್ಯರನ್ನು ಬಿಟ್ಟರೆ ಅದೆಷ್ಟೋ ಜನ ನಾಯಿಗಳನ್ನು ಮುದ್ದಿನ ಸಾಕುಪ್ರಾಣಿಗಳನ್ನಾಗಿಟ್ಟುಕೊಂಡಿದ್ದಾರೆ.... ಅವಳು ಯೇಸುಸ್ವಾಮಿಗೆ ಉತ್ತರ ಕೊಡುತ್ತಾ– **"ಸ್ವಾಮಿ, ಆ ಮಾತು ನಿಜವೇ; ನಾಯಿಮರಿಗಳಂತೂ ತಮ್ಮ ಯಜಮಾನರ ಮೇಜಿನಿಂದ ಬೀಳುವ ರೊಟ್ಟಿಯ ತುಂಡುಗಳನ್ನು ತಿನ್ನುತ್ತವಲ್ಲಾ"** ಅಂದಳು (ಮತ್ತಾಯ 15:27).

ಆಕೆಯ ಅಭಿಪ್ರಾಯ ಬಹುದೊಡ್ಡ ಬದಲಾವಣೆಯನ್ನುಂಟು ಮಾಡಿತ್ತು. ತೀವ್ರವಾದ ಗಮನ ಸೆಳೆದಿತ್ತು. ಯೇಸುಸ್ವಾಮಿ ಆಕೆಯ ಮಗಳನ್ನು ಸ್ವಸ್ಥ ಮಾಡಿದ್ದನು.

**"ನಿನ್ನ ಮನಸ್ಸಿನಂತೇ ಆಗಲಿ" (ಮತ್ತಾಯ 15:28) – ಈ ಮಾತುಗಳನ್ನು ನಾವು ಅರ್ಥಮಾಡಿಕೊಳ್ಳುವುದು ಹೇಗೆ? ನಾವಂದುಕೊಂಡಂತೆ ಆಗದಿದ್ದಾಗ ನಾವು ಅದ್ಯಾಗೆ ಪ್ರತಿಕ್ರಿಯಿಸುತ್ತೇವೆ?**

**ಗುರುವಾರ** **ನವೆಂಬರ್ 5**

## ಒಬ್ಬ ವಿದ್ಯಾರ್ಥಿ ಬಯಸಿದ್ದನು ಪಡೆದುಕೊಂಡದ್ದು

ಯೇಸು ಮತ್ತು ಆತನ ಶಿಷ್ಯರು ಯೆರೂಸಲೇಮಿನ ಕಡೆಗೆ ನಡೆದಿದ್ದರು. ಮೊದಲಿಗೆ, ಹೆರೋದನಿಗೆ ಸ್ನಾನಿಕನಾದ ಯೋಹಾನನ ವಿಷಯದಲ್ಲಿ ಚಿಂತೆಯಾಗಿತ್ತು. ಆದರೆ ಈಗ ಅಧಿಕಾರಿಗಳಿಗೆ ಮತ್ತು ಹೆರೋದರಿಬ್ಬರಿಗೆ ಯೇಸುವನ್ನು ಕುರಿತು ಚಿಂತೆಯಾಗಿತ್ತು. ರಾಜಕೀಯವಾಗಿ ಬದಲಾವಣೆ ಬೇಕಾಗಿತ್ತು. ಬದಲಾವಣೆ ಬೇಕು ಎನ್ನುವವರಲ್ಲಿ ಬಡವರನ್ನು ಮಾತ್ರವಲ್ಲ ಶಿಷ್ಯರು, ಹತಾಶೆಗೊಳಗಾದವರನ್ನೂ ಪಟ್ಟಿಯಲ್ಲಿ ಸೇರಿಸಿದ್ದರು.

ಎಲ್ಲಕ್ಕಿಂತ ಮಿಗಿಲಾಗಿ, ಯೇಸುಸ್ವಾಮಿಗೆ ಈ ಲೋಕಕ್ಕೆ ನಿರೀಕ್ಷೆ ತರುವುದು ಮುಖ್ಯವಾಗಿತ್ತು. ಆದರೆ ಅಧಿಕಾರದಲ್ಲಿರುವವರು ಮತ್ತು ಅನುಕೂಲಸ್ಥರು, ತನ್ನ ಸೇವೆಗೆ ವಿರುದ್ಧವಾಗಿ ಕೆಲಸ ಮಾಡಿ, ತನ್ನ ಉದ್ದೇಶ ನೆರವೇರದಂತೆ ನೋಡಿಕೊಳ್ಳುವುದು ಎಂಬುದು ಆತನಿಗೆ ಈಗಾಗಲೇ ಗೊತ್ತಾಗಿತ್ತು. ಆತನಿಗೆ ಯಶಸ್ಸಾಗುವುದು ಅವರಿಗೆ ಬೇಕಾಗಿರಲಿಲ್ಲ.

ಯೇಸುಕ್ರಿಸ್ತನ ಆತ್ಮೀಯ ವಲಯದಲ್ಲಿದ್ದ, ಆತನ ಹನ್ನೆರಡು ಶಿಷ್ಯರು, ಅವರೇ ಆತನ ಹನ್ನೆರಡು ವಿದ್ಯಾರ್ಥಿಗಳೂ ಸಹ ಆಗಿದ್ದರು. ಇವರು ಕ್ರಿಸ್ತನ ಕಡೆಗಿರಲು ತುಂಬಾ ಕಾತುರದಿಂದಿದ್ದರು. ಆದರೂ ಇವರು ದಿಗಿಲುಗೊಂಡಿದ್ದರು, ಅಥವಾ ಕಣ್ಣಿದ್ದರೂ ಕುರುಡರಾಗಿದ್ದರು. ಉದಾ: ಮಾರ್ಕ 8:31–33ನ್ನು ನೋಡಿರಿ. ಶ್ರೇಷ್ಠ ಗುರು, ಯೇಸುಸ್ವಾಮಿ, ಅವರು ಊಹಿಸಲೂ ಸಾಧ್ಯವಾಗದ ಕಷ್ಟಗಳನ್ನು ಅವರ ಮುಂದೆ ಸವಾಲಾಗಿಟ್ಟನು. ಎಷ್ಟೋ ವಿಷಯಗಳಲ್ಲಿ, ಏನನ್ನು ಅರಿತಿರಬೇಕಿತ್ತೋ, ಅದನ್ನರಿಯದೆ ಅವರು ಆಧ್ಯಾತ್ಮಿಕ ಕುರುಡರಾಗಿದ್ದರು (ಮಾರ್ಕ 8:37). ಮುಂದೆ ಯೇಸು ಒಬ್ಬ ಕಣ್ಣುಕಾಣದವನನ್ನು ಭೇಟಿಯಾಗಲಿರುವುದರಿಂದ ಮೇಲಿನ ಪೀಠಿಕೆಯನ್ನು ಪ್ರಸ್ತಾಪಿಸಲಾಯಿತು.

ಯೇಸುಕ್ರಿಸ್ತ ಮತ್ತು ಕುರುಡ ಬಾರ್ತಿಮಾಯನ ಕುರಿತ ಕಥೆಯನ್ನು ಮಾರ್ಕ 10:46–32ರಲ್ಲಿ ಓದಿಕೊಳ್ಳಿರಿ. ಕ್ರಿಸ್ತನು ತೋರುವ ಮಹಾಕರುಣೆಯನ್ನು ಗಮನಿಸಿರಿ. ಕುರುಡನು ತಾನು ಯೇಸುವನ್ನು ನೋಡಬೇಕೆಂಬ ಬಯಕೆಯಿಂದಿದ್ದನು. ಯೇಸು ಅವನ ಬಯಕೆಯನ್ನು ಈಡೇರಿಸಿದಾಗ, ಅವನು ತನ್ನ ದಾರಿಯಿಡಿದು ಹೋಗದೆ, ಯೇಸುವಿನ ಹಿಂದೆ ಹೋಗುತ್ತಾನೆ. ಇಲ್ಲಿ ಮಾರ್ಕನು, ಬಾರ್ತಿಮಾಯನು ಮತ್ತು ಇತರ ಶಿಷ್ಯರ ನಡುವೆ ತಾರತಮ್ಯ ತರುತ್ತಿದ್ದಾನೆ ಎಂದು ನಿಗಮನ್ನಿಸುತ್ತದೆಯೇ? ನಮ್ಮ ಶ್ರೇಷ್ಠ ಗುರುವಿನ ಬಳಿಗೆ ಹೋಗಲು ಯಾವ ಕ್ಷಣದಲ್ಲಿಯೂ ಸಿದ್ಧವಾಗಿರಬೇಕು ಎಂಬ ವಿಷಯದ ಮೇಲೆ ಮೇಲಿನ ಕಥೆ ಹೇಗೆ ಬೆಳಕು ಚೆಲ್ಲುತ್ತದೆ?

ಬಾರ್ತೆಮಾಯನಿಗೆ, ಮಗುವಿನ ತಲೆಯ ಮೇಲಿನ ಗುಂಗುರ ಕೂದಲು ನೋಡುವ ಮತ್ತು ಕೊಯ್ಲಿನ ಕಾಲದ ಗೋಧಿಯ ಬಣ್ಣ ಕಾಣಬೇಕೆಂಬ ಆಶೆ ಇದ್ದಿರಬಹುದು. ಈ ಆಶೆ ಬಾಹ್ಯಗೋಚರವಷ್ಟೇ. ಆದರೆ ಕಥೆ ಬಾಹ್ಯಗೋಚರವನ್ನು ಕುರಿತು ಮಾತನಾಡುತ್ತಿಲ್ಲ, ಆಧ್ಯಾತ್ಮಿಕ ನೋಟವನ್ನು ಕುರಿತು ಮಾತನಾಡುತ್ತಿದೆ. ಆ ನೋಟವನ್ನು ನಾವು ಪಡೆದುಕೊಳ್ಳಬೇಕು. ಆ ಶ್ರೇಷ್ಠ ಗುರು ಯಾರೆಂದು ಸತ್ಯವಾಗಿ ಅಂತರ್ಯಕ್ಕೆ ಅರಿವಾಗಬೇಕು. ಬಾಹ್ಯನೋಟವೇ ಬೇರೆ. ಅದು ಮುಖ್ಯ ಸಹ. ಯೇಸುವಿಗೆ ಅದು ಗೊತ್ತಿದೆ. ಪ್ರತಿ ಮಾನವನ ಮನದಾಳದ ಬಯಕೆ ಒಂದು ಹೊಸ ಹಾಗು ಉತ್ತಮ ಜೀವನದ ಹಾರೈಕೆಯೆಂಬುದು ಸಹ ಯೇಸುಸ್ವಾಮಿಗೆ ಗೊತ್ತಿದೆ.

**ಇಬ್ರಿಯ 5:12–14ನ್ನು ಓದಿಕೊಳ್ಳಿರಿ. ನಿಜವಾದ ಶಿಕ್ಷಣವನ್ನು ಕುರಿತು ಈ ವಾಕ್ಯಗಳು ನಮಗೆ ಬೋಧಿಸುವುದೇನು?**

**ಶುಕ್ರವಾರ** **ನವೆಂಬರ್ 6**

**ಹೆಚ್ಚಿನ ಚಿಂತನೆ :** ವೈಟಮ್ಮನವರ ಸ್ಟೆಪ್ಸ್ ಟು ಕ್ರೈಸ್ಟ್ ಪುಸ್ತಕದ "ದಿ ಟೆಸ್ಟ್ ಆಫ್ ಡಿಶೈಪಲ್‌ಶಿಪ್" ಎಂಬ ಅಧ್ಯಾಯವನ್ನು ಓದಿಕೊಳ್ಳಿರಿ.

ಶ್ರೇಷ್ಠ ಗುರುವಿಗೆ ನಾವು ಸತ್ಯವಾದ ಪ್ರತಿಕ್ರಿಯೆ ವ್ಯಕ್ತಪಡಿಸುವುದನ್ನು ವೈಟಮ್ಮನವರು– "ಆತನ ಸ್ವರೂಪವನ್ನು ಧರಿಸಿಕೊಳ್ಳಲು ಹಂಬಲಿಸುವುದು, ಆತನ ಆತ್ಮನನ್ನು ಉಸಿರಾಡುವುದು. ಆತನ ಚಿತ್ತವನ್ನು ನೆರವೇರಿಸುವುದು, ಎಲ್ಲ ವಿಷಯಗಳಲ್ಲಿ ಆತನನ್ನು ಮೆಚ್ಚಿಸುವುದು" ಎಂದು ಹೇಳಿದ್ದಾರೆ (ಸ್ಟೆಪ್ಸ್ ಟು ಕ್ರೈಸ್ಟ್, ಪುಟ 58). ಆಕೆ ಹೇಳುತ್ತಾರೆ– ಕ್ರಿಸ್ತನ ಒಡನಾಟ "ಆನಂದಮಯವಾಗಿರುತ್ತದೆ" ಎಂದು (ಸ್ಟೆಪ್ಸ್ ಟು ಕ್ರೈಸ್ಟ್, ಪುಟ 59). ಸತ್ಯವೇದದಲ್ಲಿ, ಮತ್ತಾಯನ ಸುವಾರ್ತೆಯ 5,6 ಮತ್ತು 7ನೇ ಅಧ್ಯಾಯಗಳನ್ನು ಓದಿಕೊಳ್ಳಿರಿ. ಇದನ್ನು ಪರ್ವತ ಪ್ರಸಂಗ ಎಂದು ಕರೆಯಲಾಗಿದೆ. ಶ್ರೇಷ್ಠ ಗುರು, ತಮ್ಮ ವಿದ್ಯಾರ್ಥಿಗಳು ಏನೆಲ್ಲ ತಿಳಿದುಕೊಳ್ಳಬೇಕೆಂದು ಅಂದುಕೊಂಡರೋ ಅವುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ. ಅಷ್ಟೇ ಅಲ್ಲ, ಇದು, ಯಾವ ರಾಜ್ಯವನ್ನು ಆತ ಈ ಭೂಮಿಯ ಮೇಲೆ ಸಂಸ್ಥಾಪನೆ ಮಾಡಬೇಕೆಂದು

ಅಂದುಕೊಂಡಿದ್ದನೋ, ಆ ವಿಷಯದಲ್ಲಿ ಮಂಡಿಸಿದ ಪ್ರಧಾನ ವಿಷಯ ಮಂಡನೆ ಸಹ ಆಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರು, ಯಾವ ರೀತಿಯಾಗಿ ಆದಾಮ ಮತ್ತು ಹವ್ವಳನ್ನು ಹಾಗು ಯಾಕೋಬನನ್ನು ಉದ್ದೇಶಿಸಿ ಮಾತನಾಡಿದನೋ, ಅದೇ ರೀತಿಯಲ್ಲಿ, ಯೇಸು ನಮ್ಮನ್ನು ಉದ್ದೇಶಿಸಿ ಮಾತನಾಡುತ್ತಿದ್ದಾನೆ. ನಮ್ಮ ಮನದಾಳದ ಹಂಬಲವನ್ನು ಯೇಸು ಗಮನಿಸುತ್ತಾನೆ. ನಾವು ಯಾರು ಮತ್ತು ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದನ್ನು ಗಮನಿಸಿ. ಬಾರ್ತಿಮಾಯನಿಗೆ ಸಹಾಯ ಮಾಡಿದಂತೆ ಸಹಾಯ ಮಾಡಿ ನಮ್ಮನ್ನು ಚಕಿತಗೊಳಿಸುತ್ತಾನೆ. ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು, ನಮ್ಮ ಮಕ್ಕಳಿಗೂ ಮತ್ತು ಬೇರೆ ಯಾರಿಗೂ ಸತ್ಯವೇದ ಪಾಠವನ್ನು ಹೇಗೆ ಕಲಿಸಿಕೊಡಬಹುದು ಎಂಬುದನ್ನು ಕುರಿತು ಚಿಂತನೆ ಮಾಡಿರಿ. ಸಾಮಾನ್ಯವಾದ ಸತ್ಯವೇದ ಪಾಠ ಬೋಧನೆಗೂ ಮತ್ತು ತೀವ್ರ ಗಂಭೀರವಾಗಿ ನಡೆಯುವ ಪಾಠ ಬೋಧನೆಗೂ ನಡುವಿರುವ ವ್ಯತ್ಯಾಸವೇನು? ಅಂತಹ ಬೋಧನೆ ಜನರ ಜೀವನದಲ್ಲಿ ಎಂತಹ ವ್ಯತ್ಯಾಸವನ್ನುಂಟು ಮಾಡುವುದು?

2. ನಿಮ್ಮ ಜೀವನ ಪಯಣ ಶುದ್ಧವಾಗಿ ವೈಯಕ್ತಿಕವೋ ಅಥವಾ ನೀವು ನಂಬುವ ಜನರೊಂದಿಗೆ ಚರ್ಚೆ ಮಾಡುವುದರಿಂದ ಸಹಾಯ ಪಡೆಯುವಂಥದ್ದೋ? ಸಭೆ "ಕ್ರಿಸ್ತನ ದೇಹ" (1 ಕೊರಿಂಥ 12:27) ಎಂಬ ಪರಿಕಲ್ಪನೆ ಬೇರೆಯವರೊಂದಿಗೆ ನಾವು ಮಾಡುವ ಸಂಭಾಷಣೆ, ಕ್ರಿಸ್ತನ ಬಗ್ಗೆ ನೀವು ಏನನ್ನು ತಿಳಿದುಕೊಳ್ಳಬೇಕೆಂದಿದ್ದಿರೋ ಅದನ್ನು ತಿಳಿದುಕೊಳ್ಳುವುದಕ್ಕೆ ಒಂದು ದಾರಿ ಎಂಬ ಸಲಹೆ ಕೊಡುವುದು ಹೇಗೆ?

3. ಗುರುವಾರದ ಪಾಠದಲ್ಲಿ ಬಾರ್ತೆಮಾಯ ತನ್ನ ದೃಷ್ಟಿ ಪಡೆದುಕೊಂಡ ತಕ್ಷಣ ಯಾವ ಗಳಿಗೆಯಲ್ಲಿ ಆತನ ದೈಹಿಕ (ಆಧ್ಯಾತ್ಮಿಕ) ನ್ಯೂನತೆ ಸರಿಯಾಯಿತೋ ಆ ಕ್ಷಣ, ಯೆರೂಸಲೇಮಿಗೆ ಹೊರಟಿದ್ದ ಯೇಸುವನ್ನು ಹಿಂಬಾಲಿಸಿದ್ದನು. ಆತನೊಂದಿಗೆ ದಾರಿ ಸವೆಯುವಾಗ, ಪ್ರತಿದಿನ, ಶ್ರೇಷ್ಠ

ಗುರುವಿನ ವಿವೇಕತನವನ್ನು ಕೇಳಿ ಅರಿಯುತ್ತಿದ್ದನು. ಅವನು ಯೇಸುವಿನ ಸ್ವರೂಪವನ್ನು ತನ್ನಲ್ಲಿ ಮೂಡಿಸಿಕೊಳ್ಳಲು, ಆತನ ಆತ್ಮವನ್ನು ಉಸಿರಾಡಲು, ಆತನ ಚಿತ್ತದಂತೆ ನಡೆಯಲು ಮುಂದಾದನು ಎಂದು ನಾವು ಅಂದುಕೊಳ್ಳೋಣ. ಪರ್ವತ ಪ್ರಸಂಗದಲ್ಲಿ ನಿರ್ದಿಷ್ಟಮಾನವನ್ನು ಎಷ್ಟು ಎತ್ತರದಲ್ಲಿ ಯೇಸುಸ್ವಾಮಿ ಇಟ್ಟಿದ್ದಾನೆಂದರೆ ಸ್ಟೆಪ್ಸ್ ಟು ಕ್ರೈಸ್ಟ್ ಪುಸ್ತಕದಲ್ಲಿ ಹೇಳುವಂತೆ ನಿರ್ದಿಷ್ಟಮಾನದಲ್ಲಿ "ಆನಂದಿಸೋಣ", ಏಕೆ?

4. ಗುರುವಾರ ಪಾಠದ ಕೊನೆಯಲ್ಲಿ ಕೊಡಲಾದ ಪ್ರಶ್ನೆಗಳೆಡೆ ಹೆಚ್ಚು ಗಮನ ಕೊಡೋಣ. ಕೆಟ್ಟದ್ದು ಮತ್ತು ಒಳ್ಳೇಯದರ ನಡುವಿನ ವ್ಯತ್ಯಾಸವನ್ನು ಗ್ರಹಿಸುವುದು ಹೇಗೆ? ಒಳ್ಳೇಯದು ಮತ್ತು ಕೆಟ್ಟದ್ದನ್ನು ಅದ್ಹೇಗೆ ವ್ಯಾಖ್ಯಾನಿಸುತ್ತೇವೆ. ಇಲ್ಲಿ ಪಡೆಯುವ ಜ್ಞಾನವನ್ನು ಉಪಯೋಗಿಸದೆ ನಮ್ಮಲ್ಲೇ ಇಟ್ಟುಕೊಳ್ಳುವುದಕ್ಕಿಂತ ಆ ಜ್ಞಾನವನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯವೇಕೆ?